ಕತ್ತಲೆ ಸರಿದು ಬೆಳಗಿನ ನಸುಕು ಕಿಟಕಿಯಿಂದ ಇಣುಕುತ್ತಿದ್ದಂತೆ "ಅಯ್ಯೋ ನಾನು ಇಳಿಯೋ ಜಾಗ ಬಂದೇ ಬಿಡ್ತು" ಅಂದವಳೇ ದಡ ಬಡ ಲಗೇಜ್ ತೆಗೆದುಕೊಂಡು ಹೊರಟಳು. ಪ್ರೇಮಲೋಕದಲ್ಲಿ ವಿಹರಿಸುತ್ತಿದ್ದ ಆತ "ನಿಮ್ಮ ಹೆಸರು, ಉದ್ಯೋಗ, ಅಡ್ರೆಸ್ಸು ಏನೂ ಹೇಳ್ಲೆ ಇಲ್ಲಾ" ಅಂದ.

"ಎಲ್ಲಾ ಮೆಸೇಜ್ ಮಾಡ್ತೀನಿ." ಅಂದ್ಲು, "ಫೋನ್ ನಂಬರ್‍ರೆ ಕೊಟ್ಟಿಲ್ಲಾ" ಅಂದ. "ಕೊಡಿ" ಅಂದ್ಲು, "ತಗೊಳ್ಳಿ" ಅಂದ. ರೈಲು ಹೊರಟರೆ ಅನ್ನೋ ತಳಮಳ. ತಕ್ಷಣ ಅವಳು ತನ್ನ ಮೊಬೈಲ್ ಬ್ಯಾಗಿನಿಂದ ತೆಗೆದು "ಹೇಳಿ" ಅಂದಳು. ರೈಲಿನ ಹಾರ್ನ್ ಶಬ್ದ ಇಬ್ಬರನ್ನೂ ಅರೆಕ್ಷಣ ಸ್ತಬ್ಧರನ್ನಾಗಿಸಿತು. ಕೆಳಗಿಳಿದು ರೈಲಿನ ಸಮಕ್ಕೆ ನಂಬರ್ ಫೀಡ್ ಮಾಡುತ್ತಾ ಓಡಲಾರಂಭಿಸಿದಳು. ಆ ನಸುಕಿನಲ್ಲಿ ರೈಲು ದೂರ ಸರಿಯಿತು, ಇಬ್ಬರೂ ಒಬ್ಬರಿಗೊಬ್ಬರು ಕೈ ಬೀಸಿ ಬೀಳ್ಕೊಡುತ್ತಿದ್ದರು. "ಕಾಲ್ ಮಾಡಿ" ಅನ್ನೋ ಅವನ ಮಾತು ಕೇಳದಷ್ಟು ದೂರ ಸರಿದಿತ್ತು ರೈಲು. ಅತ್ತ ಅವನು ತನ್ನ ಮೊಬೈಲ್‌ನತ್ತ ಧಾವಿಸಿ ಅವಳ ಕರೆಯ ನಿರೀಕ್ಷೆ ಮಾಡುತ್ತಿದ್ದಾನೆ, ಇತ್ತ ಇವಳು ನಂಬರ್ ಸೇವ್ ಮಾಡಲು ಹಿಂದಿರುಗಿ ನೋಡುವಷ್ಟರಲ್ಲಿ ಕಳ್ಳನೊಬ್ಬ ಮೊಬೈಲ್ ಕಿತ್ತು ಓಡಿಯಾಗಿತ್ತು. ಹುಚ್ಚಿಯಂತೆ ಬೆನ್ನಟ್ಟಿದಳಾದರೂ ಆತ ತಪ್ಪಿಸಿಕೊಂಡ. ಒಮ್ಮೆಲೆ ಕುಸಿದು ಕೂತಳು. ಅದೆಷ್ಟು ವರ್ಷಗಳ ಕನಸು ಇನ್ನೇನು ನನಸಾಯಿತು ಎನ್ನುವಷ್ಟರಲ್ಲಿ ಕೈಜಾರಿದ ನೋವು, ಮತ್ತೆ ಅವನನ್ನು ಭೇಟಿಯಾಗಲು ಬೇರೆ ದಾರಿಯೇ ಇಲ್ಲ, ಎಲ್ಲಾ ಬಾಗಿಲುಗಳೂ ಮುಚ್ಚಿದ ಅನುಭವ, ಮತ್ತದೇ ಒಂಟಿ ಬದುಕು... ಇಷ್ಟೆಲ್ಲ ನೋವು ಇಡೀ ರೈಲು ನಿಲ್ದಾಣಕ್ಕೆ ಅವಳ ಚೀರಾಟದ ಮೂಲಕ ತಿಳಿಯುತ್ತಿತ್ತು.

ಕರೆಯ ನಿರೀಕ್ಷೆಯಲ್ಲಿ ಬಕ ಪಕ್ಷಿಯಂತೆ ಕಾಯುತ್ತಾ ಕುಳಿತ ಅವನಿಗೆ ಒಂದೊಂದು ಕ್ಷಣ ಒಂದೊಂದು ಯುಗದಂತೆ ಭಾಸವಾಗುತ್ತಿತ್ತು. ಪದೇ ಪದೇ ಫೋನ್ ಸರಿ ಇದೆಯೇ, ನೆಟ್‌ವರ್ಕ್ ಇದೆಯೇ ಎಂದು ನೋಡುತ್ತಿದ್ದಾನೆ, ಆತಂಕದಲ್ಲಿ ಎದೆಯ ಬಡಿತ ಏರುತ್ತಿದೆ, ಆದರೆ ಆಕೆಯ ಕರೆಯ ಸುಳಿವೇ ಇಲ್ಲ... ರೈಲು ಪಯಣದ ಸಂಗಾತಿ ಜೀವನ ಸಂಗಾತಿಯಾಗುತ್ತಾಳೆ ಎಂಬ ನಂಬಿಕೆ ಹುಸಿಯಾಗುತ್ತಿರುವ ಭಾವವನ್ನು ತಡೆಯಲಾಗದೆ, ಜೋರಾಗಿ ಅಳಲಾಗದೆ ತಲೆಯನ್ನು ರೈಲಿನ ಕಿಟಕಿಗೆ ಒರಗಿಸಿ ತನ್ನ ಒಂಟಿ ಪಯಣ ಒಂಟಿಯಾಗೇ ಸಾಗಲಿದೆ ಎಂಬ ನೋವು ಅವನೊಳಗೆ ಬಿರುಗಾಳಿ ಎಬ್ಬಿಸಿತು. ರೈಲು ನಿಲ್ದಾಣ ತಲುಪಿತ್ತಾದರೂ ಜೀವನದ ರೈಲು ಪ್ರಾರಂಭದ ಪ್ಲಾಟ್‌ಫಾರಂಗೆ ಬಂದು ನಿಂತಿತ್ತು.

## ಉದಯ್ ಜಾದೂಗಾರ್

ಜಾದೂ ಕಲಾ ಪ್ರಪಂಚದಲ್ಲಿ ಎತ್ತರದ ಸಾಧನೆ ಮಾಡಿದ ಬಹುಮುಖ ಪ್ರತಿಭೆಯ ಕಲಾವಿದ. ದೇಶ ವಿದೇಶಗಳಲ್ಲಿ 10 ಸಾವಿರಕ್ಕೂ ಹೆಚ್ಚಿನ ಜಾದೂ ಪ್ರದರ್ಶನಗಳನ್ನು ನೀಡಿದ್ದಾರೆ.

ಜಾದೂ ಜತೆಗೆ ಮಾತನಾಡುವ ಗೊಂಬೆ ಮತ್ತು ಶ್ಯಾಡೋ ಪ್ಲೇಯನ್ನು ಕರಗತ ಮಾಡಿಕೊಂಡಿದ್ದು, ಟೀವಿ ಕಾರ್ಯಕ್ರಮಗಳಲ್ಲೂ ಜನಪ್ರಿಯರು. ಬೆಂಗಳೂರಿನಲ್ಲಿ 'ಉದಯ್ಸ್ ಮ್ಯಾಜಿಕ್ ವರ್ಡ್' ಎಂಬ ಸಂಸ್ಥೆಯ ಮೂಲಕ ಜಾದೂ ಉಪಕರಣಗಳನ್ನು ತಯಾರಿಸಿ ದೇಶವಿದೇಶಗಳ ಜಾದೂ ಕಲಾವಿದರಿಗೆ ವಿತರಿಸುವ ಉದ್ಯಮವನ್ನು ನಡೆಸುತ್ತಿದ್ದಾರೆ. ಉದಯ್ ನಟ, ನಿರ್ದೇಶಕ, ಲೇಖಕ, ಛಾಯಾಗ್ರಾಹಕ, ಚಿತ್ರ ಕಲಾವಿದ, ಚೆಸ್ ಆಟಗಾರ ಕೂಡ. 'ಯುದ್ಧ ಮತ್ತು ಸ್ವಾತಂತ್ರ್ಯ', 'ದರೋಡೆ' ಸಿನಿಮಾಗಳನ್ನು ನಿರ್ದೇಶಿಸಿ ನಿರ್ಮಿಸಿದ್ದಾರೆ. ಜಾದೂ, ಜೋಕ್ಸ್, ಸುಡೊಕು ಕುರಿತ ಅವರ ಪುಸ್ತಕಗಳು ಪ್ರಕಟವಾಗಿವೆ. 'ಹಣ, ಯಶಸ್ಸು, ಆರೋಗ್ಯ, ಮನಃಶಾಂತಿ ಗಳಿಸುವುದು ಹೇಗೆ?' ಎಂಬುದು ಅವರ ಜನಪ್ರಿಯ ಪುಸ್ತಕ.